ಮುರಿದು ಮದುವೆ ಕ್ಯಾನ್ಸಲ್ ಮಾಡುದ್ಮೇಲೆ, ಸೊಸೆ ಆಗಿ ಹೋಗ್ಬೇಕಾಗಿರೋ ಅದೇ ಮನೆಗೆ ಈ ಹುಡುಗಿ ಬಡತನದಿಂದ ಕೆಲಸದವಳಾಗಿ ಹೋಗೋ ಪರಿಸ್ಥಿತಿ ಬರುತ್ತೆ ನೋಡಿ ಸಾರ್. ಈ ಹುಡುಗಿ ಛಲ ಬಿಡ್ದಂಗೆ ಅವರ ಮನೆ ಚಾಕ್ರೀನೂ ಮಾಡ್ಕೊಂಡು, ಇತ್ಲಾ ಕಡೆ ಐಎಎಸ್ ಪರೀಕ್ಷೆನೂ ಕಟ್ಟವ್ಳೆ. ಇಲ್ಲಿ ತನಕ ಇಷ್ಟಾಗಿದೆ, ಮುಂದಕ್ಕೇನಾಗುತ್ತೋ ನೋಡ್ಬೇಕು ಸಾರ್. ನಾವೇಳುದ್ರೆ ಫೀಲಾಗಲ್ಲ ಸಾರ್, ನೀವೇ ನೋಡ್ಬೇಕು ಸಾರ್'.

ಭುಜಂಗನ್ನ ಈ ಪ್ರಶ್ನೆ ಕೇಳ್ಬಾರ್ದಿತ್ತೇನೊ ಅನಿಸಿತ್ತು ಮಾಯಣ್ಣನಿಗೆ.

ಜೀಪ್ ಚೇತನಾ ಲೇಔಟ್ ಪ್ರವೇಶ ಮಾಡಿತ್ತು.

ಇಡೀ ಚೇತನಾ ಲೇಔಟ್, ನ್ಯಾಯಾಲಯದಲ್ಲಿ ನನೆಗುದಿಗೆ ಬಿದ್ದ ವಿವಾದಿತ ಜಾಗವಾಗಿದ್ದು, ಅಲ್ಲೊಂದು ಇಲ್ಲೊಂದು ಮನೆಗಳ ಹೊರತು ಬಟಾಬಯಲು. ಇನ್ನೂ ಯಾವ ರಸ್ತೆಗೂ ಡಾಂಬರು ಬಿದ್ದಿರಲಿಲ್ಲ. ಅಷ್ಟು ದೂರದಲ್ಲೇ ಜೀಪ್ ನಿಲ್ಲಿಸಿ, ಸುತ್ತುಗಟ್ಟಿ ನಿಂತ ಜನಜಂಗುಳಿಯನ್ನು ಸೀಳಿಕೊಂಡು ಒಳಹೊಕ್ಕು, ಘಟನಾ ಸ್ಥಳದ ಹೊರ ಜಾಗದ ಸಮೀಕ್ಷೆಗಿಳಿದಿದ್ದ ಮಾಯಣ್ಣ. ಕೊಲೆ ನಡೆದ ಬಿಲ್ಡಿಂಗ್, ದೊಡ್ಡ ಸೈಟಿನಲ್ಲಿ ಹೆಚ್ಚು ಕಡಿಮೆ ಪೂರ್ತಿಯಾಗಿ ಕಟ್ಟಿದ ಮನೆ. ಕೆಳಗಿನ ಮನೆಯಲ್ಲಿ ಮಾಲೀಕರು ವಾಸವಿದ್ದರೆ, ಮೇಲೆ ಮೊದಲನೇ ಅಂತಸ್ತಿನ, ಎರಡು ರೂಮಿನ ಮನೆಯನ್ನು ಅಮ್ಮು ಬಾಡಿಗೆ ಹಿಡಿದಿದ್ದಳು. ಹಿಂದಕ್ಕೆ ಕಟ್ಟಿದ್ದ ಈ ಮೊದಲಂತಸ್ತಿನ ಮನೆಯ ಮುಂಬದಿಗೆ ಸಾಕಷ್ಟು ವಿಶಾಲವಾದ ಖಾಲಿ ತಾರಸಿ ಜಾಗವೂ ಇತ್ತು. ಕೊಲೆ ನಡೆದ ಈ ಮೇಲಿನ ಮನೆಗೆ ಹೊರಗಿನಿಂದಲೇ ಮೆಟ್ಟಿಲು, ಆದರೆ ಇಡೀ ಕಟ್ಟಡಕ್ಕೆ ಒಂದೇ ಗೇಟು. ಬಿಲ್ಡಿಂಗ್‌ನ ಎರಡೂ ಬದಿ ಖಾಲಿ ಸೈಟ್, ಹಿಂಬದಿಗೆ ಹೆಚ್ಚು ಕಡಿಮೆ ಅಂಟಿಕೊಂಡಂತಹ ಒಂದು ನಿರ್ಮಾಣ ಹಂತದ ಕಟ್ಟಡ, ಎದುರು ಸಾಲಿಗೆ ಪೂರ್ತಿ ಖಾಲಿ ಸೈಟುಗಳು.

'ಭುಜಂಗ, ನೀವು ಮತ್ತು ಆ ಮೂರು ಜನ ಪೀಸಿಗಳು ಸೇರಿ, ಸುತ್ತೂ ಟೇಪ್ ಕಟ್ಟಿ, ಯಾರೂ ದಾಟಿ ಬರದ ಹಾಗೆ ಬಂದೋಬಸ್ತ್ ಮಾಡಿ'.

'ಯೆಸ್ ಸಾರ್'.

ಮಾಯಣ್ಣನನ್ನು ಕಂಡ ತಕ್ಷಣ ವಿನಯ್ ಓಡುತ್ತಾ ಬಂದು ಸಲ್ಯೂಟ್ ಮಾಡಿ ನಿಂತ.

ಕೊಲೆಯಾದ ಮನೆಯ ಕಾಂಪೌಂಡ್ ಗೋಡೆಯ ಮುಂದೆ, ಹಿಂದಿನ ರಾತ್ರಿಯ ಮಳೆಗೆ, ಒದ್ದೆಯಾಗಿದ್ದ ರಸ್ತೆ ಬದಿಯ ಮಣ್ಣಿನ ನೆಲದಲ್ಲಿ ಸ್ಪಷ್ಟವಾಗಿ ಅಚ್ಚೊತ್ತಿದಂತೆ ಮೂಡಿದ್ದ ಟೈರ್ ಮತ್ತು ಶೂ ಹೆಜ್ಜೆ ಗುರುತುಗಳನ್ನು ಗಮನಿಸಿದ ಮಾಯಣ್ಣ, 'ವಿನಯ್, ಈ ಫೋಟೋಸ್ ತಗೊಳ್ಳಿ, ಹಾಗೇ ನೋಡಿ, ಇನ್ನೆಲ್ಲೆಲ್ಲಿ ಟೈರ್ ಮತ್ತು ಶೂ ಫುಟ್ ಪ್ರಿಂಟ್ಸ್ ಇದೆ ಅಂತ' ಎಂದು ಸೂಚನೆಯಿತ್ತ.

ಮಾಯಣ್ಣನಿಗೆ ಅದಾಗಲೇ ಮೇಲಧಿಕಾರಿಗಳಿಂದ ಈ ಕೊಲೆಯ ತನಿಖಾಧಿಕಾರಿಯಾಗಿ ಅಧಿಕೃತ ಆದೇಶ ಬಂದಿತ್ತು. ಫೋರೆನ್ಸಿಕ್ ಫೋಟೊಗ್ರಾಫರ್, ಫಿಂಗರ್ ಪ್ರಿಂಟ್ ತಜ್ಞರು, ಪೊಲೀಸು ನಾಯಿ ಹ್ಯಾಂಡ್ಲರ್ಸ್ ಎಲ್ಲರಿಗೂ ಬರಹೇಳಿದ ಆದೇಶ ಹೋಗಿತ್ತು.

'ಭುಜಂಗ, ನೀವು ಇಲ್ಲೇ ಕ್ರೌಡ್ ಕಂಟ್ರೋಲ್ ಮಾಡಿ, ವಿನಯ್ ಜೊತೆ ಮೇಲೆ ಹೋಗಿ ನಾನು ಕ್ರೈಮ್ ಸ್ಪಾಟ್ ನೋಡ್ಕೊಂಡ್ ಬರ್ತೀನಿ' ಎನ್ನುತ್ತಾ ನಿಧಾನವಾಗಿ, ಸೂಕ್ಷ್ಮವಾಗಿ, ಹೆಜ್ಜೆಯಡಿಯ ನೆಲವನ್ನು ಗಮನಿಸುತ್ತಾ ಮೆಟ್ಟಿಲೇರುವಾಗ ಹೊರಗೆ ಕಂಡ ಶೂ ಹೆಜ್ಜೆ ಗುರುತುಗಳು ಸ್ವಲ್ಪ ಮಸುಕು ಮಸುಕಾಗಿ ಮೆಟ್ಟಿಲುಗಳ ಮೇಲೂ ಕಂಡಿತ್ತು.

'ನಾನೂ ಗಮನಿಸ್ದೆ ಸಾರ್. ಫೋಟೋಸೂ ತಗೊಂಡಿದ್ದೀನಿ' ಎಂದ ವಿನಯ್.

ವಿನಯ್‌ನ ಸೂಕ್ಷ್ಮಮತಿಗೆ ಮನಸ್ಸಿನಲ್ಲಿಯೇ ತಲೆದೂಗುತ್ತಾ ಕೊಲೆ ನಡೆದ ಮಹಡಿ ಮನೆಯ ಬಾಗಿಲಿಗೆ ಬಂದಿದ್ದ ಮಾಯಣ್ಣ, ಹಾಗೇ ಗಮನಿಸುತ್ತಾ ನಿಂತ. ಅಮ್ಮು ಮನೆಯ ಮುಂದಿನ ತಾರಸಿ ಜಾಗದಲ್ಲಿ ಬಟ್ಟೆ ಒಣಗಿಸಲು ಭುಜದೆತ್ತರಕ್ಕೆ ನಾಲ್ಕು ಸಾಲು ತಂತಿ ಕಟ್ಟಿದ್ದರು, ಬಹುಶಃ ಎರಡೂ ಮನೆಯವರಿಗೆ ಅನುಕೂಲವಾಗುವಂತೆ.

ವಿನಯ್‌ನ ಕುರಿತು ಮಾಯಣ್ಣ,

'ಮನೆಯೊಳಕ್ಕೆ ಬರಲು ಒಂದೇ ಗೇಟು, ಒಂದೇ ಸ್ಟೇರ್ಸು, ಒಂದೇ ಬಾಗಿಲು. ಬಲವಂತವಾಗಿ ಒಳನುಗ್ಗಿದ ರೀತಿ ಕಾಣ್ತಾಯಿಲ್ಲ. ತೆರೆದ ಬಾಗಿಲ ಮೂಲಕ ಒಳಹೊಕ್ಕಿರಬಹುದು ಅಥವಾ ಪರಿಚಿತರು ಅಂತ ಬಾಗಿಲು ತೆಗೆದಿರಬಹುದು. ಲುಕ್ಸ್ ಲೈಕ್, ನಾಟ್ ಎ ಫೋರ್ಸ್‌ಡ್ ಎಂಟ್ರಿ. ಡೋರ್ ಹ್ಯಾಂಡಲ್ ಮುಟ್ಟಿಲ್ಲ ತಾನೆ ವಿನಯ್?'

'ಇಲ್ಲ ಸಾರ್. ಗೊತ್ತಿದೆ ಸಾರ್, ಅದರ ಮೇಲೆ ಅಪರಾಧಿಯ ಫಿಂಗರ್ ಪ್ರಿಂಟ್ಸ್ ಇರೋ ಚಾನ್ಸಸ್ ಇದೆ ಅಂತ'.

ಸಾಕಷ್ಟು ಪೊಲೀಸು ಅಧಿಕಾರಿಗಳು ತನಿಖಾ ಕಲೆಯ ವಿಧಿ ವಿಧಾನಗಳನ್ನು, ತಮ್ಮ ಅನುಭವದಲ್ಲಿ ದಕ್ಕಿಬಂದ ಕೌಶಲ್ಯಗಳನ್ನು, ತಮ್ಮ ಕೆಳಗಿನ ಸಿಬ್ಬಂದಿಗಳಿಗೆ ಧಾರೆಯೆರೆಯುತ್ತಾ ಅವರನ್ನು ಸಜ್ಜುಗೊಳಿಸುತ್ತಾ ಹೋಗುತ್ತಾರೆ – ಆ ಪೈಕಿ ಮಾಯಣ್ಣ ಕೂಡ ಒಬ್ಬ.

ಮಾಯಣ್ಣ ಮೆಲ್ಲಗೆ ಅರೆತೆರೆದ ಬಾಗಿಲ ಅಡ್ಡ ಪಟ್ಟಿಯನ್ನು ಬೆರಳಿನಿಂದ ನೂಕಿ, ಹೊಸಲಿನ ಹೊರಗೇ ನಿಂತು ನೋಡಿದ – ಅವನ ವೃತ್ತಿಜೀವನದಲ್ಲಿ ಹಿಂದೆಂದೂ ಕಂಡಿರದಂತಹ ಭೀಭತ್ಸ ದೃಶ್ಯ ಅದಾಗಿತ್ತು. ಒಳಗೆ ಮಾರು ದೂರದಲ್ಲಿ, ಹೊಸಿಲ ದಿಕ್ಕಿಗೆ ತಲೆ ಹಾಕಿ ನೆಲದ ಮೇಲೆ ಅಂಗಾತ ಬಿದ್ದ ದೇಹ, ಹರಡಿಕೊಂಡ ತಲೆಗೂದಲು, ಬಿಗಿಹಿಡಿದ ಮುಷ್ಟಿ, ಉದ್ದಕ್ಕೆ ಚಾಚಿಕೊಂಡ ಕಾಲು, ಬಲವಾದ ಪೆಟ್ಟಿನಿಂದ ಒಂದಿಷ್ಟು ಆಕಾರ ಕಳೆದುಕೊಂಡ ತಲೆ, ರಕ್ತದ ಮಡುವಿನಲ್ಲಿ ನೆಂದು ಆವೃತವಾದ ಮುಖ ಮತ್ತು ದೇಹ.

ಹತ್ಯೆಗೈಯ್ದು ಹೋದ ಹಂತಕನನ್ನು ಬಾಗಿಲ ತನಕ ನೋಟದಲ್ಲೇ ಹಿಂಬಾಲಿಸಿದಂತೆ ಪೂರ್ತಿ ತೆರೆದು ಹಿಂದಕ್ಕೆ ನಿಟ್ಟಿಸುವ ಕಣ್ಣುಗಳು – ಎಂಥಾ ಕಲ್ಲೆದೆಯನ್ನೂ ಝಲ್ಲೆನಿಸುವಂತಿತ್ತು ಶವದ ಆ ಬಿರಿದ ಕಣ್ಣೋಟ. ಕೊಲೆಯಾಗಿ ಬಿದ್ದಿದ್ದ ಅಮ್ಮು ಕೊನೆಗಳಿಗೆಯ ತನಕ ಕೊಲೆಗಾರನೊಂದಿಗೆ, ಭೀಕರವಾಗಿ ಸೆಣಸಾಡಿದಂತೆ ಸುತ್ತಲಿನ ಎಲ್ಲಾ ವಸ್ತುಗಳು ಚೆಲ್ಲಾಪಿಲ್ಲಿಯಾಗಿದ್ದವು. ರಕ್ತ ಎಲ್ಲೆಂದರಲ್ಲಿ ಚಿಮ್ಮಿ ಚಿತ್ತಾರವಾಗಿತ್ತು. ನೆಲ, ಗೋಡೆ, ಕಿಟಕಿ ಪರದೆ, ಧರಿಸಿದ್ದ ನೈಟಿ, ತಾರಸಿ ಎಲ್ಲೆಡೆ. ಕ್ರೌರ್ಯದ ಪರಾಕಾಷ್ಠೆಯ ದರ್ಶನವಾದಂತೆ, ಮಾಯಣ್ಣ ತನಗರಿವಿಲ್ಲದಂತೆ ಹಿಂದಿಂದಕ್ಕೆ ನಾಲ್ಕೈದು ಹೆಜ್ಜೆಯಿಟ್ಟು ಒಂದ್ಯೆದು ನಿಮಿಷ ಕಲ್ಲಾಗಿ ನಿಂತುಬಿಟ್ಟ. ಮಾಯಣ್ಣನ ಮರಗಟ್ಟಿದ ಮನಸ್ಸು ಸ್ಥಿಮಿತಕ್ಕೆ ಬಂದು ಮತ್ತೆ ತನಿಖಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಎರಡು ನಿಮಿಷ ಬೇಕಾಯ್ತು. ಯಾರು ಏನು ಬೇಕಾದರೂ ಆಗಿರಬಹುದು. ಒಳಗೆ ಮನುಷ್ಯರೇ ತಾನೆ.

ಕೊಲೆಯಾಗಿದ್ದವಳು ಸೆಲೆಬ್ರಿಟಿ. ಸಾರ್ವಜನಿಕರ, ಮಾಧ್ಯಮದವರ ಗಮನ ಇದು ಬಗೆಹರಿಯುವ ತನಕ ಈ ಕೇಸಿನ ಮೇಲೇಯೇ ಇದ್ದು ತನ್ನ ಮೇಲೆ ಅಪಾರ ಒತ್ತಡ ಬೀಳುವುದು ಖಚಿತವಾಗಿತ್ತು. ಇನ್ನು ವಿರೋಧ ಪಕ್ಷದವರು ಈ ಕೇಸಿನ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿದು ಬಿದ್ದಿದೆ ಎಂದು ಹುಯಿಲೆಬ್ಬಿಸಿದರೆ, ಮೇಲಧಿಕಾರಿಗಳು ತನ್ನನ್ನು ಅವಸರಿಸುತ್ತಾ, ತನಿಖೆಯ ಮೇಲೆ ಇನ್ನಷ್ಟು ಒತ್ತಡ ಹೇರುವುದು ಖಚಿತವಾಗಿತ್ತು. ಇದೊಂದೇ ಕೇಸಿನ ಆಧಾರದ ಮೇಲೆ, ರಾಜ್ಯದ ಪೊಲೀಸು ವ್ಯವಸ್ಥೆಯ ದಕ್ಷತೆಯ ಅಳತೆಗೆ ನಿಲ್ಲುತ್ತಾರೆ ಎನ್ನುವುದೂ ಖಚಿತವಾಗಿತ್ತು. ಆದಷ್ಟು ತ್ವರಿತವಾಗಿ ತನಿಖೆಯು ಮುಗಿದು ಅಪರಾಧಿಯನ್ನು ಹಿಡಿದು, ಮೊಕದ್ದಮೆ ಜಡಿದು, ನ್ಯಾಯಾಲಯದಲ್ಲಿ ನಿಲ್ಲಿಸದಿದ್ದರೆ ತಾನು ತೊಂದರೆಗೆ ಸಿಲುಕುವುದು ಅಷ್ಟೇ ಖಚಿತವಾಗಿತ್ತು. ಈಗಾಗಲೇ ಮೇಲಧಿಕಾರಿಗಳು, ಮೀಡಿಯಾ ಪರಿಚಿತರು, ಮಿತ್ರರು, ಸಂಬಂಧಿಸಿದ, ಸಂಬಂಧಿಸದ ಯಾರ್ಯಾರೋ, ಎಡೆಬಿಡದೆ ಕರೆ ಮಾಡುತ್ತಾ ವಿವರಗಳಿಗಾಗಿ ಪೀಡಿಸಲಾರಂಬಿಸಿದ್ದರು. ಮಾಯಣ್ಣನ ತಲೆ ಒಲೆಯ ಮೇಲೆ ಕೂತು ಸೀಟಿ ಊದುತ್ತಿರುವ ಪ್ರೆಷರ್ ಕುಕ್ಕರ್‌ನಂತಾಗಿತ್ತು.

'ಸಾರ್, ಫೋನ್ ಬಂದಿತ್ತು. ಇನ್ನು ಇಪ್ಪತ್ತು ನಿಮಿಷದಲ್ಲಿ, ಫೋಟೊಗ್ರಾಫರ್, ಫಿಂಗರ್ ಪ್ರಿಂಟ್ ಎಕ್ಸ್‌ಪರ್ಟ್ಸ್, ಡಾಗ್ ಹ್ಯಾಂಡ್ಲರ್ಸ್, ಎಲ್ಲಾ ಇಲ್ಲಿರ್ತಾರಂತೆ'.

'ಆದಷ್ಟು ಬೇಗ ಬಾಡೀನ ಪೋಸ್ಟ್ ಮಾರ್ಟಮ್‌ಗೆ ಕಳುಸ್ಬೇಕು ವಿನಯ್. ಅದಕ್ಕೂ ಮುಂಚೆ ಇಲ್ಲಿ ಮಹಜರು, ಪಂಚನಾಮೆ, ಕ್ರೈಮ್‌ನ ಪ್ರಾಥಮಿಕ ತನಿಖೆ, ಸಾಕ್ಷಿ ಸಂಗ್ರಹಣೆ, ಎಲ್ಲಾ ಮುಗಿಬೇಕು. ಹಾಗೆ ಆ ಮೆಡಿಕಲ್ ಪೆಥಾಲಜಿಸ್ಟ್, ಆಮೇಲೆ ಆಸ್ಪತ್ರೆ ಸೂಪರಿಂಟೆಂಡೆಂಟ್ ಹತ್ರ ಮಾತಾಡಿ ಪೋಸ್ಟ್ ಮಾರ್ಟಮ್‌ಗೆ ಟೈಮ್ ಫಿಕ್ಸ್ ಮಾಡಿ'.

'ಈಗ್ಲೇ ಫೋನ್ ಮಾಡ್ತೀನಿ ಸಾರ್'.

'ಫೈನ್... ಹಾಗೆ ಬ್ಲಡ್ ಸ್ಪ್ಯಾಟರ್ ಅನಲಿಸ್ಟ್‌ನೂ ಬರೋದುಕ್ಕೆ ಹೇಳಿ'.

'ಅವರ್ಯಾರು ಸಾರ್?'

'ಎಲ್ಲಾ ಕಡೆ ಚೆಲ್ಲಿ, ಚಿಮ್ಮಿ ಚಿತ್ತಾರ ಆಗಿರೋ ರಕ್ತದ ಕಲೆಗಳನ್ನ ಗಮನಿಸಿ, ವಿಶ್ಲೇಷಣೆ ಮಾಡಿ ಘಟನೆಯ ಮರುಸೃಷ್ಟಿ, ಅಂದರೆ ರೀ ಕನ್‌ಸ್ಟ್ರಕ್ಷನ್ ಆಫ್ ಕ್ರೈಮ್ ಸೀನ್‌ಗೆ ಬೇಕಾಗ್ತಾರೆ'.

(ಸಶೇಷ)